Recvd @ WWOPM
on 11-01-13

**ಕರ್ನಾಟಕ ಸರ್ಕಾರದ ನಡವಳಿಗಳು**

| | |
|---|---|
| ವಿಷಯ: | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ – ಕರ್ನಾಟಕ ಉದ್ಯೋಗ ಖಾತರಿ ನಿಧಿಯಿಂದ ಜಿಲ್ಲಾ ಪಂಚಾಯಿತಿಗಳಿಗೆ 2012-13ನೇ ಸಾಲಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ. |
| ಉಲ್ಲೇಖ: | 1)ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿದಿ ನಿಯಮ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 37 NRE 2008 ದಿನಾಂಕ:16-03-2009.<br>2) ಸರ್ಕಾರದ ಆದೇಶದ ಸಂಖ್ಯೆ:ಗ್ರಾಅಪ 167:ಉಖಾಯೋ.2010 ದಿ:8-7-2011. |

STATE BANK OF MYSORE 'C' Shd. Branch Bangalore-1

**ಪ್ರಸ್ತಾವನೆ:**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ ನಿಯಮಗಳು 2008ರ ನಿಯಮ 3ರ ಅಡಿ ಮೇಲೆ ಉಲ್ಲೇಖ(1) ರಲ್ಲಿನ ಸರ್ಕಾರದ ಆದೇಶದನ್ವಯ ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ಸ್ಥಾಪಿಸಲಾಗಿರುತ್ತದೆ. ಸದರಿ ನಿಯಮಗಳಡಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುದಾನವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಅದರಂತೆ ಉಲ್ಲೇಖ(2)ರ ಸರ್ಕಾರಿ ಆದೇಶದ ರೀತ್ಯಾ ಬಾಗಲಕೋಟೆ, ಬೀದರ್, ಹಾಸನ, ಶಿವಮೊಗ್ಗ ಮತ್ತು ಯಾದಗಿರಿ ಜಿಲ್ಲೆಗಳ ಅನುಷ್ಠಾನ ಇಲಾಖೆಗಳಿಗೆ ಅನುದಾನ ಬಿಡುಗಡೆ ಮಾಡಬೇಕಾಗಿದ್ದು, ಯೋಜನೆಯ ಅನುಷ್ಠಾನದ ಪ್ರಗತಿಯನ್ನು ದಿನಾಂಕ:11-01-2013ರಂದು ಪರಿಶೀಲಿಸಿ ಮೇಲೆ ತಿಳಿಸಿರುವ 05 ಜಿಲ್ಲೆಗಳ ಜಿಲ್ಲಾ ಪಂಚಾಯಿತಿಗಳಿಗೆ **₹.500.00ಲಕ್ಷ** (**₹.ಐದು ಕೋಟಿಗಳು ಮಾತ್ರ**)ಗಳ ಅನುದಾನವನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ.

**ಸರ್ಕಾರದ ಆದೇಶ ಸಂ:ಗ್ರಾಅಪ:154: ಉಖಾಯೋ-2012 ಬೆಂಗಳೂರು ದಿನಾಂಕ:11-01-2013.(ಕ್ರ.ಸ.103)**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಗಣಿಸಿ ಬಾಗಲಕೋಟೆ, ಬೀದರ್, ಹಾಸನ, ಶಿವಮೊಗ್ಗ ಮತ್ತು ಯಾದಗಿರಿ ಜಿಲ್ಲೆಗಳ ಅನುಷ್ಠಾನ ಇಲಾಖೆಗಳ ಜಿಲ್ಲಾ ಪಂಚಾಯಿತಿಗಳಿಗೆ ಒಟ್ಟು **₹.500.00ಲಕ್ಷ** (**₹.ಐದು ಕೋಟಿಗಳು ಮಾತ್ರ**)ಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ನಿಧಿಯಿಂದ ನೇರವಾಗಿ ವರ್ಗಾಯಿಸಲು ಆದೇಶಿಸಲಾಗಿದೆ.

(₹.ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲೆಯ ಹೆಸರು | ವರ್ಗಾಯಿಸಬೇಕಾಗಿರುವ ಅನುದಾನದ ವಿವರ | | |
|---|---|---|---|---|
| | ಜಿಲ್ಲಾ ಪಂಚಾಯಿತಿ | ಕೇಂದ್ರ ಪಾಲು | ರಾಜ್ಯ ಪಾಲು | ಒಟ್ಟು |
| 01 | ಬಾಗಲಕೋಟೆ | 90.00 | 10.00 | 100.00 |
| 02 | ಬೀದರ್ | 90.00 | 10.00 | 100.00 |
| 03 | ಹಾಸನ | 90.00 | 10.00 | 100.00 |
| 04 | ಶಿವಮೊಗ್ಗ | 90.00 | 10.00 | 100.00 |
| 05 | ಯಾದಗಿರಿ | 90.00 | 10.00 | 100.00 |
| | ಒಟ್ಟು | **450.00** | **50.00** | **500.00** |

ಈ ಅನುದಾನವನ್ನು ಎಸ್.ಬಿ.ಎಮ್., ಎಮ್.ಎಸ್.ಬಿಲ್ಡಿಂಗ್ ಶಾಖೆ, ಖಾತೆ ಸಂಖ್ಯೆ:64002298270 ಬೆಂಗಳೂರು ಇಂದ 05 ಜಿಲ್ಲಾ ಪಂಚಾಯಿತಿಗಳ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲು ಆದೇಶಿಸಿದೆ. ಬ್ಯಾಂಕ್ ಖಾತೆಗೆ ಜಮಾವಾಗುವಲ್ಲಿ ವಿಳಂಭವಾದಲ್ಲಿ ನಿರ್ದೇಶನಾಲಯದ ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ) ಇವರ ದೂರವಾಣಿ ಸಂ:080-22342161 ಕ್ಕೆ ಸಂಪರ್ಕಿಸಲು ಸೂಚಿಸಿದೆ.

ಈ ಆದೇಶದ ಪ್ರತಿಯನ್ನು ಅಂತರ್ಜಾಲ e-mail ID:nregs-ka@nic.in ಸಂದೇಶದ ಮೂಲಕ ಕಳುಹಿಸಲಾಗಿದೆ.

**ಷರತ್ತುಗಳು:-**

01. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮಾರ್ಗಸೂಚಿಯನ್ವಯ ವೆಚ್ಚ ಮಾಡತಕ್ಕದ್ದು.
02. ಅನುಷ್ಠಾನ ಸಂಸ್ಥೆಗಳು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಡಿ ಅನುಷ್ಠಾನಗೊಳ್ಳುವ ಕಾಮಗಾರಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 167/ಉಖಾಯೋ 2010 ದಿ:18-09-2012ರ ಪತ್ರದಲ್ಲಿ ಸೂಚಿಸಿರುವ ಎಲ್ಲಾ ಷರತ್ತುಗಳನ್ನು ಮತ್ತು ಮಾರ್ಗದರ್ಶಕ ಅಂಶಗಳನ್ನು ಪಾಲಿಸತಕ್ಕದ್ದು.
03. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಅವಶ್ಯವಿರುವ ಗ್ರಾಮ ಪಂಚಾಯಿತಿಗಳಿಗೆ ನಿಯಮಾನುಸಾರ ಒಂದು ವಾರದೊಳಗೆ ಬಿಡುಗಡೆ ಮಾಡಲು ಕ್ರಮವಹಿಸಿ **MIS** ನಲ್ಲಿ ಕಡ್ಡಾಯವಾಗಿ ದಾಖಲಿಸತಕ್ಕದ್ದು.
03. ಬಿಡುಗಡೆಗೊಳಿಸಿರುವ ಅನುದಾನದಲ್ಲಿ ಕೂಲಿ ಕಾರ್ಮಿಕರ ಮಜೂರಿಯನ್ನು ಮೊದಲ ಆದ್ಯತೆ ಮೇರೆಗೆ ಪಾವತಿಸಲು ಆದೇಶಿಸಿದೆ.
04. ಮುಂದಿನ ಅನುದಾನ ಬೇಡಿಕೆ ಪ್ರಸ್ತಾವನೆ ಸಲ್ಲಿಸುವಾಗ ಜಾಬ್‌ಕಾರ್ಡ್ ಶೇ.100ರಷ್ಟು ನ್ಯಾಯಸಮ್ಮತ (Validation) ಮಾಡಿ ದೃಢೀಕರಿಸುವುದು ಹಾಗೂ ಒಂದು ಕುಟುಂಬಕ್ಕೆ ಒಂದೇ ಜಾಬ್‌ಕಾರ್ಡ್ ಇರುವಂತೆ ಎಲ್ಲಾ ಅವಶ್ಯಕ್ರಮ ಜರುಗಿಸುವುದು.
05. ಈ ಯೋಜನೆಯ ಅಡಿ ಅನುಷ್ಠಾನಗೊಳ್ಳುವ ಕಾಮಗಾರಿಗಳ ಪೈಕಿ ಜಿಲ್ಲಾ ಪಂಚಾಯತ್‌ನಿಂದ ಶೇ.10, ಕಾರ್ಯಕ್ರಮ ಅಧಿಕಾರಿಗಳಿಂದ ಶೇ.25 ಹಾಗೂ ಅನುಷ್ಠಾನ ಅಧಿಕಾರಿಗಳಿಂದ ಶೇ.100 ರಷ್ಟು ಕಾಮಗಾರಿಗಳ ಪರಿಶೀಲನೆ ನಡೆಸಿದ ಬಗ್ಗೆ ದೃಢೀಕರಿಸುವುದು.
06. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಅನುಷ್ಠಾನದ ಪೈಕಿ ಈಗಾಗಲೆ MIS ನಲ್ಲಿರುವ ಅಂಕಿ ಅಂಶಗಳಿಗೂ ಕ್ಷೇತ್ರದಲ್ಲಿರುವ ಭೌತಿಕ ಹಾಗೂ ಆರ್ಥಿಕ ಪ್ರಗತಿಗೆ ಹೊಂದಾಣಿಕೆಯಾಗತಕ್ಕದ್ದು.
07. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಉಪಯೋಗಿಸಿಕೊಂಡು ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯಿತಿಗಳಲ್ಲಿ ಸ್ಥಿರಾಸ್ತಿ/ಚರಾಸ್ತಿಯನ್ನು ಸೃಜಿಸಿದಲ್ಲಿ ಆ ಬಗ್ಗೆ ವಿವರಗಳನ್ನು ಸ್ತಿರಾಸ್ತಿ ವಹಿಯ ದಾಖಲೆ ನಿರ್ವಹಿಸತಕ್ಕದ್ದು.
08. ಬಿಡುಗಡೆಯಾದ ಅನುದಾನಕ್ಕೆ ಸಂಬಂಧಪಟ್ಟಂತೆ ನಗದು ಪುಸ್ತಕವನ್ನು ನಿರ್ವಹಿಸತಕ್ಕದ್ದು, ಹಾಗೂ ಜಮಾ ಖರ್ಚಿಗೆ ಸಂಬಂಧಿಸಿದಂತೆ ವಿವರಗಳನ್ನು MISನಲ್ಲಿ ಅಳವಡಿಸಿ Bank Pass Sheet ನೊಂದಿಗೆ ಮರು ಹೊಂದಾಣಿಕೆ ಕಾರ್ಯವನ್ನು ಪ್ರತಿ ತಿಂಗಳೂ ತಪ್ಪದೇ ಕೈಗೊಳ್ಳುವುದರ ಮೂಲಕ ಒಂದೇ ಅಂಕಿಅಂಶ ಎಲ್ಲಾ ದಾಖಲೆಗಳಲ್ಲಿ ಇರುವಂತೆ ನೋಡಿಕೊಳ್ಳಲು ಸೂಕ್ತ ಕ್ರಮ ವಹಿಸುವುದು.
09. ಯೋಜನೆ ಅನುಷ್ಠಾನದಲ್ಲಿ ಸಾಮಾಜಿಕ ಲೆಕ್ಕ ತಪಾಸಣೆ (Social Audit) ಪ್ರಕ್ರಿಯೆ ನಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
10. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮಾರ್ಗಸೂಚಿಗಳು ಪಾಲನೆಯಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.

ಮೇಲಿನ ಷರತ್ತುಗಳನ್ನು ಚಾಚೂ ತಪ್ಪದೆ ಪಾಲಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮುನೀಶ್ ಮೌದ್ಗಿಲ್)
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ದೂರವಾಣಿ ಸಂಖ್ಯೆ: 080-22372738

ಗೆ:

01. ಸಹಾಯಕ ಮಹಾವ್ಯವಸ್ಥಾಪಕರು, ಎಸ್.ಬಿ.ಎಮ್., ಜಿ-ಸೇವಾ ಶಾಖೆ, ಎಲ್/ಸಿ/ರೋಡ್, ಶಿವಾಜಿನಗರ, ಬೆಂಗಳೂರು ಇವರಿಗೆ ಅನುಬಂಧದಲ್ಲಿ ತೋರಿಸಿರುವಂತೆ **ಬಾಗಲಕೋಟೆ, ಬೀದರ್, ಹಾಸನ, ಶಿವಮೊಗ್ಗ ಮತ್ತು ಯಾದಗಿರಿ** ಜಿಲ್ಲೆಗಳ ಜಿಲ್ಲಾ ಪಂಚಾಯತಿಗಳಿಗೆ ತಕ್ಷಣವೇ ಹಣವನ್ನು ವರ್ಗಾಯಿಸಲು ಕೋರಿ ಕಳುಹಿಸಲಾಗಿದೆ. ಯಾವುದೇ ಕಾರಣಕ್ಕೆ ಅನುದಾನವು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳ ಖಾತೆಗೆ ಹೊಂದಾಣಿಕೆಯಾಗದೆ ಹಿಂತಿರುಗಿ ಬಂದಲ್ಲಿ ವಿವರವನ್ನು ಕೂಡಲೇ ಲೆಕ್ಕಪತ್ರ ಶಾಖೆಗೆ ನೀಡುವುದು.
02. ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಹಣಾಧಿಕಾರಿ, **ಬಾಗಲಕೋಟೆ, ಬೀದರ್, ಹಾಸನ, ಶಿವಮೊಗ್ಗ ಮತ್ತು ಯಾದಗಿರಿ** ಜಿಲ್ಲಾ ಪಂಚಾಯತಿಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
03. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತಿ **ಬಾಗಲಕೋಟೆ, ಬೀದರ್, ಹಾಸನ, ಶಿವಮೊಗ್ಗ ಮತ್ತು ಯಾದಗಿರಿ.**
04. ಉಪಮಹಾಲೇಖಪಾಲರು, (ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ) ಮಹಾಲೇಖಪಾಲರ ಕಛೇರಿ, ಹೊಸಕಟ್ಟಡ, (ANNEX C) ಬೆಂಗಳೂರು.
05. ಪ್ರಾದೇಶಿಕ ಆಯುಕ್ತರು, ಆಯುಕ್ತರ ಕಛೇರಿ, **ಬೆಳಗಾಂ, ಗುಲ್ಬರ್ಗ,ಮೈಸೂರು,** ಬೆಂಗಳೂರು.

ಪ್ರತಿಯನ್ನು:-

01. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಜಿಲ್ಲಾ ಪಂಚಾಯತ್) ವಿಧಾನ ಸೌಧ, ಬೆಂಗಳೂರು
02. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು.
03. ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, **ಬಾಗಲಕೋಟೆ, ಬೀದರ್, ಹಾಸನ, ಶಿವಮೊಗ್ಗ ಮತ್ತು ಯಾದಗಿರಿ.**
04. ಜಂಟಿ ನಿರ್ದೇಶಕರು-1, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ MIS ನಲ್ಲಿ ಆರೋಹಣ ಮಾಡಲು ಅಗತ್ಯ ಕ್ರಮಕ್ಕಾಗಿ.
05. ಶ್ರೀ ಶ್ರೀನಿವಾಸ ಹೆಚ್.ಎಮ್. ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೆಬ್‌ಸೈಟ್ ನಲ್ಲಿ ಆರೋಹಣ ಮಾಡಲು ಅಗತ್ಯ ಕ್ರಮಕ್ಕಾಗಿ.

# Abstract

## Release of funds

| RO_NO | District Name | Release_date | Rel_amount(Lakhs) |
|---|---|---|---|
| 119 | BAGALKOTE | 11/1/2013 | 100 .00 |
| 119 | BIDAR | 11/1/2013 | 100 .00 |
| 119 | HASSAN | 11/1/2013 | 100 .00 |
| 119 | SHIMOGA | 11/1/2013 | 100 .00 |
| 119 | YADGIR | 11/1/2013 | 100 .00 |

**Grand Total** **500.00 Lakhs**

Funds Released to Line Departments through ZP.

DIRECTOR.
MGNREGS,RDPRDept,Bangalore.

# ZILLA PANCHAYAT FUND RELEASED UNDER MGNREGS,2012-13

| Sl No | RO No | Dist_name | Bank_name | Account no | IFSC code | Branch name | Rel. Amount(Rs in lakhs) | Release date |
|---|---|---|---|---|---|---|---|---|
| 1 | 119 | Bagalkote | State Bank of India | 11029261255 | SBIN0000812 | Bagalkote Main Branch | 100.00 | 11/1/2013 |
| 2 | 119 | Bidar | State Bank of Hyderabad | 62058163581 | SBHY0020237 | SBH Main,Bidar | 100.00 | 11/1/2013 |
| 3 | 119 | Hassan | State Bank of Mysore | 64016035247 | SBMY0040045 | Hassan | 100.00 | 11/1/2013 |
| 4 | 119 | Shimoga | State Bank of Mysore | 64016087194 | SBMY0040132 | Main Branch Shimoga | 100.00 | 11/1/2013 |
| 5 | 119 | Yadgir | State Bank of India | 31110083618 | SBIN0003754 | yadgir | 100.00 | 11/1/2013 |

TOTAL 500.00 LAKHS

Director
MGNREGS,RDPRDept.Bangalore